

ಹಲ್ಲಿನ ರೋಗಗ್ರಸ್ಥವಾದ ಒಳರಚನೆಯ ಭಾಗವಾದ ದಂತ ಮಜ್ಜೆಯನ್ನು ಸಂಪೂರ್ಣವಾಗಿ (ನರ ಮತ್ತು ರಕ್ತನಾಳಗಳ ಸಹಿತ) ತೆಗೆಯಲಾಗುತ್ತದೆ. ಹಲ್ಲಿನ ಒಳಭಾಗವನ್ನು ವಿವಿಧ ತರದ ಔಷಧಿಗಳನ್ನು ಬಳಸಿ ಶುಚಿ ಮಾಡಲಾಗುತ್ತದೆ. ಬೇರು ನಾಳದ ಒಳಗೆ ಸೇರಿಕೊಂಡ ಎಲ್ಲಾ ಬ್ಯಾಕ್ಟೀರಿಯಾ ಮುಕ್ತ ಸುರಕ್ಷಿತ ತಾಣವಾಗಿ ಮಾಡಲಾಗುತ್ತದೆ.

ನಂತರ ಆ ಜಾಗಕ್ಕೆ ಗಟ್ಟಾಪಚಾ ಎಂಬ ಮೇಣದಂತಹ ವಸ್ತುವನ್ನು ತುಂಬಿಸಲಾಗುತ್ತದೆ. ಈ ವಸ್ತು ಬೇರುನಾಳದ ತುಂಬ ಪರಿಣಾಮಕಾರಿಯಾಗಿ ಜಾಗವನ್ನು ತುಂಬಿಕೊಂಡು ಪುನಃ ಕ್ರಿಮಿಗಳು ಸೇರದಂತೆ ಮತ್ತು ಆ ಜಾಗದಲ್ಲಿ ಕೀವು ಆಗದಂತೆ ತಡೆಯುತ್ತದೆ. ಈ ಮೇಣದಂತಹ ವಸ್ತು ತುಂಬ ಸದೃಢ. ಅಲ್ಲದೆ ಯಾವುದೇ ಕೆಟ್ಟ ಪರಿಣಾಮ ಬೀರುವುದಿಲ್ಲ.

ಬೇರು ನಾಳ ಚಿಕಿತ್ಸೆ ಮಾಡುವಾಗ ದಂತ ಮಜ್ಜೆಯನ್ನು ಸಂಪೂರ್ಣವಾಗಿ ತೆಗೆಯಲು ಸಾಮಾನ್ಯವಾಗಿ ರೀಮರ್ ಮತ್ತು ಫೈಲ್ ಎಂಬ ಕೈ ಬಳಕೆ ಸಾಧನ ಬಳಸಲಾಗುತ್ತದೆ. ಈಗೀಗ ಬ್ಯಾಟರಿಚಾಲಿತ/ಯಂತ್ರಚಾಲಿತ ಉಪಕರಣಗಳಿಂದ ಬಹಳ ಬೇಗ, ಅಂದರೆ ಒಂದೇ ದಿನದಲ್ಲಿ ಬೇರುನಾಳಗಳನ್ನು ತೆಗೆದು ಶುಚಿಗೊಳಿಸಿ ಬೇರುನಾಳಗಳನ್ನು ತುಂಬಿಸುವ ವ್ಯವಸ್ಥೆ ಇದೆ. ಈ ವ್ಯವಸ್ಥೆಯನ್ನು 'ಸಿಂಗಲ್ ಸಿಟ್ಟಿಂಗ್ ಆರ್ಸಿಟಿ' ಎನ್ನಲಾಗುತ್ತದೆ. ಆದರೆ ಶಾಸ್ತ್ರೀಯವಾದ, ಕ್ರಮಬದ್ಧವಾದ ಬೇರುನಾಳ ಚಿಕಿತ್ಸೆ ಹೆಚ್ಚು ಪರಿಣಾಮಕಾರಿ.

ನಾಲ್ಕೈದು ಬಾರಿ ದಂತ ವೈದ್ಯರ ಬಳಿಗೆ ಬಂದು (ವಾರದಲ್ಲಿ ಒಮ್ಮೆ ಅಥವಾ ಎರಡು ಬಾರಿ) ಬೇರು ನಾಳಗಳನ್ನು ಶುಚಿಗೊಳಿಸಿ ಬ್ಯಾಕ್ಟೀರಿಯಾ ಮುಕ್ತಗೊಳಿಸಿದ ಬಳಿಕ ಬೇರು ನಾಳಗಳನ್ನು ತುಂಬಿಸಲಾಗುತ್ತದೆ. ಸಾಮಾನ್ಯವಾಗಿ ಒಂದು ಹಲ್ಲಿಗೆ ಬೇರು ನಾಳ ಚಿಕಿತ್ಸೆ ನೀಡಲು ಕನಿಷ್ಠ ಪಕ್ಷ ಎರಡು ವಾರ ತಗುಲಬಹುದು. ಹಾಗೆಂದ ಮಾತ್ರಕ್ಕೆ ಎಲ್ಲ ಹಲ್ಲುಗಳಿಗೂ ಇದೇ ರೀತಿ ಇರಬೇಕು ಎಂದೇನೂ ಇಲ್ಲ. ಬೇರು ನಾಳ ಬ್ಯಾಕ್ಟೀರಿಯಾ ಇಲ್ಲದೆ ಶುಭ್ರವಾಗಿದ್ದಲ್ಲಿ ಒಂದೇ ಬಾರಿ ಬೇರುನಾಳ ಶುಚಿಗೊಳಿಸಿ ತುಂಬಿಸಬಹುದು.

ಮುಂದಿನ ದವಡೆ ಹಲ್ಲುಗಳಾದ ಕೋರೆಹಲ್ಲು ಮತ್ತು ಬಾಚಿ ಹಲ್ಲುಗಳಿಗೆ ಒಂದೇ ಬೇರು ಇರುವುದರಿಂದ ಬೇರು ನಾಳ ಚಿಕಿತ್ಸೆ ಬಹಳ ಸುಲಭ. ಸಾಕಷ್ಟು ಪರಿಣತಿ. ಕೌಶಲ್ಯ ಹಾಗೂ ತರಬೇತಿ ಇದ್ದಲ್ಲಿ ಸಾಮಾನ್ಯ ದಂತ ಚಿಕಿತ್ಸಾ ವೈದ್ಯರೂ ಈ ಹಲ್ಲು ಗಳಿಗೆ ಬೇರುನಾಳ ಚಿಕಿತ್ಸೆ ಮಾಡಬಹುದು. ಆದರೆ ದವಡೆ ಹಲ್ಲುಗಳಿಗೆ ಎರಡು ಅಥವಾ ಹೆಚ್ಚು ಬೇರು ಮತ್ತು ನರಗಳು ಇರುವುದರಿಂದ ಈ ಹಲ್ಲುಗಳಿಗೆ ಬೇರು ನಾಳ ಚಿಕಿತ್ಸೆ ಮಾಡಿಸುವುದು ಸುಲಭವಲ್ಲ.

ತಜ್ಞರ ಬಳಿಯೇ ಚಿಕಿತ್ಸೆ ಪಡೆದುಕೊಳ್ಳಿ

ಈ ಚಿಕಿತ್ಸಾ ವಿಧಾನದಲ್ಲಿ ಪರಿಣತರಾದ ಬೇರುನಾಳ ತಜ್ಞರ ಬಳಿಯೇ ಚಿಕಿತ್ಸೆ ಪಡೆಯುವುದು ಉತ್ತಮ. ಅಂತೆಯೇ ಕೊನೆಯ ದವಡೆ ಹಲ್ಲು ಅಥವಾ ವಿವೇಕದ ಹಲ್ಲುಗಳಿಗೆ ಬೇರುನಾಳ ಚಿಕಿತ್ಸೆ ಮಾಡುವುದು ತುಂಬಾ ಕಷ್ಟ. ಅತೀ ಅಗತ್ಯ ಇದ್ದಲ್ಲಿ ಹಲ್ಲಿನ ಎಕ್ಸ್‌ರೇ (ಕ್ಷ ಕಿರಣ) ತೆಗೆದು ಬೇರುಗಳ ಸಂಖ್ಯೆ, ಅಕಾರ ಮತ್ತು ರಚನೆಯನ್ನು ಅಧ್ಯಯನ ಮಾಡಿದ ನಂತರವೇ ಬೇರುನಾಳ ಚಿಕಿತ್ಸಾ ತಜ್ಞರ ಬಳಿ ಚಿಕಿತ್ಸೆ ಪಡೆಯುವುದು ಒಳಿತು.

ದಂತದ ಎಕ್ಸ್ ರೇ ಸಹಾಯ ಇಲ್ಲದೆ ಬೇರು ನಾಳ ಚಿಕಿತ್ಸೆ ಮಾಡುವುದು ತುಂಬಾ ಅಪಾಯಕಾರಿ. ಯಾವುದೇ ಹಲ್ಲಿಗೆ ಬೇರು ನಾಳ ಚಿಕಿತ್ಸೆ ಮಾಡಿಸುವುದಿದ್ದರೂ ದಂತ ಕ್ಷ– ಕಿರಣ ಇಲ್ಲದೆ ಮಾಡಿಸಲೇಬಾರದು. ರೂಟ್ ಕೆನಲ್ ಚಿಕಿತ್ಸೆ ಮಾಡಿಸುವ ಮೊದಲು ದಂತ ವೈದ್ಯರು ಹಲ್ಲಿನ ಪರಿಸ್ಥಿತಿಯನ್ನು ಪರೀಕ್ಷಿಸಿ ಅಗತ್ಯವಿದ್ದಲ್ಲಿ ದಂತ ಕ್ಷ ಕಿರಣ ಮೂಲಕ ಅವಲೋಕಿಸಿ ಬೇರುಗಳ ರಚನೆ, ಸಂಖ್ಯೆ ಆಕಾರ ಬಗ್ಗೆ ಸೂಕ್ಷ್ಮವಾಗಿ ಗಮನಿಸಿ ಯಾವ ಚಿಕಿತ್ಸೆ ಉತ್ತಮ ಎಂದು ಪರಿಹಾರ ತಿಳಿಸುತ್ತಾರೆ.

ಬೇರುನಾಳ ಚಿಕಿತ್ಸೆ ಮಾಡಿದ ಬಳಿಕ ಬೇರುನಾಳವನ್ನು ಗಟ್ಟಾಪಚಾ ಎಂಬ ವಸ್ತುವಿನಿಂದ ಗಟ್ಟಿಯಾಗಿ ತುಂಬಿಸಲಾಗುತ್ತದೆ. ಅದರ ಮೇಲೆ ಸಾಂಪ್ರದಾಯಿಕ ಬೆಳ್ಳಿ ಅಥವಾ ಹಲ್ಲಿನ ಬಣ್ಣದ ಸಿಮೆಂಟ್‌ನಿಂದ ತುಂಬಿಸಿ ಅದಕ್ಕೆ ಹಲ್ಲಿನ ಆಕಾರ ಕೊಡಲಾಗುತ್ತದೆ. ಬೇರು ನಾಳ ಚಿಕಿತ್ಸೆ ಮಾಡಿದ ಬಳಿಕ ಹಲ್ಲು ಟೊಳ್ಳಾಗಿ ಅದರ ಗಡಸುತನ ಅಥವಾ ದೃಢತೆಯನ್ನು ಕಳೆದುಕೊಳ್ಳುವ ಸಾಧ್ಯತೆ ಹೆಚ್ಚು. ಈ ಕಾರಣದಿಂದಲೇ ಬೇರು ನಾಳ ಚಿಕಿತ್ಸೆಯ ಬಳಿಕ ಹಲ್ಲಿಗೆ ಕವರ್ (ಕ್ರೌನ್) ಹಾಕಲಾಗುತ್ತದೆ.

ಹಾಗೆ ಕ್ರೌನ್ ಮಾಡಿಸಿದಲ್ಲಿ ಮಾಮೂಲಿ ಹಲ್ಲಿನಂತೆ ಬೇರು ನಾಳ ಚಿಕಿತ್ಸೆ ಮಾಡಿದ ಹಲ್ಲಿನಲ್ಲೂ ಅಗಿಯಲು, ಜಗಿಯಲು ಬಳಸಬಹುದು. ಒಮ್ಮೆ ಬೇರುನಾಳ ಚಿಕಿತ್ಸೆ ಮಾಡಿಸಿದ ಬಳಿಕ ಹಲ್ಲಿನಲ್ಲಿ ನೋವು ಬರುವ ಸಾಧ್ಯತೆ ಕಡಿಮೆ. ಆದರೆ ಚಿಕಿತ್ಸೆ ಸಮಯದಲ್ಲಿ ನೋವು ನಿವಾರಕ ಮಾತ್ರೆ ಮತ್ತು ಆಂಟಿಬಯೋಟಿಕ್ ತೆಗೆದುಕೊಳ್ಳುವ ಪ್ರಮೇಯ ಬರಬಹುದು.

(ಲೇಖಕರು ಮಂಗಳೂರಿನಲ್ಲಿ ದಂತವೈದ್ಯರು.
ಸಂಪರ್ಕ: 9845135787)

## ತಪ್ಪುಕಲ್ಪನೆ

ಜನಸಾಮಾನ್ಯರು ಬೇರು ನಾಳ ಚಿಕಿತ್ಸೆ ಹೆಚ್ಚು ನೋವಿನ ಚಿಕಿತ್ಸೆ ಎಂದು ತಪ್ಪುಕಲ್ಪನೆ ಹೊಂದಿದ್ದಾರೆ. ಬೇರು ನಾಳಗಳನ್ನು ಶುಚಿಗೊಳಿಸುವ ಸಂದರ್ಭದಲ್ಲಿ ನೀಡುವ ಅರಿವಳಿಕೆ ಚುಚ್ಚುಮದ್ದು ನೋವಿನ ಅನುಭವ ನೀಡುವುದಿಲ್ಲ. ಅಲ್ಲದೆ ಈ ಚಿಕಿತ್ಸೆ ಪಡೆಯಲು ವಯೋಮಿತಿಯ ನಿರ್ಬಂಧ ಇಲ್ಲ. ಹಲ್ಲುಗಳು ಗಟ್ಟಿಯಾಗಿದ್ದು ವಸಡುಗಳು ಆರೋಗ್ಯವಾಗಿ ಇದ್ದಲ್ಲಿ ಯಾವುದೇ ವಯಸ್ಸಿನಲ್ಲಿ 'ರೂಟ್ ಕೆನಲ್ ಥೆರಪಿ' ಪಡೆಯಬಹುದು.

